(ಗೊಂದಲ)

ಅಧ್ಯಕ್ಷರು : ಇದನ್ನು ವಿಶೇಷ ಪ್ರಕರಣವೆಂದು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡುತ್ತೇನೆ.

V) ವಿಷಯ : ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ

ಶ್ರೀ ವೆಂಟಕರಾವ್ ನಾಡಗೌಡ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ,

ಇದರಲ್ಲಿ ಸಣ್ಣ Correction ಇದೆ. ಇದನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಮಾಡುತ್ತೇವೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರಿ ಅರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದ್ದು, ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನನುಸರಿಸಿ ಸಿಂಧನೂರು ತಾಲ್ಲೂಕಿನಲ್ಲಿ ಸಂಚಾರ ಪೊಲೀಸ್ ಠಾಣೆ ತೆರೆಯಲು ಪರಿಶೀಲಿ ಸಲಾಗುವುದು.

ಶ್ರೀ ವೆಂಕಟರಾವ್ ನಾಡಗೌಡ : ಕಳೆದ ಸಲ ಮಾನ್ಯ ಮುಖ್ಯಮಂತ್ರಿ ಯವರೂ ಸಹ ಪತ್ರ ಕೊಟ್ಟು ಅಲ್ಲಿ ಪೊಲೀಸ್ ಠಾಣೆ ತೆರೆಯಬೇಕೆಂದು ಹೇಳಿದ್ದಾರೆ. ಅದಲ್ಲದೆ, ಮೊನ್ನೆ 25 ಠಾಣೆಗಳನ್ನು ರಾಜ್ಯದಲ್ಲಿ ಹೊಸದಾಗಿ sanction ಮಾಡಿದ್ದೀರಿ. ನಮ್ಮ ರಾಯಚೂರು ಜಿಲ್ಲೆಯ ದೇವದುರ್ಗಕ್ಕೆ ಕೊಡುತ್ತೀರಿ, ಸಿಂಧನೂರಿಗೆ ಕೊಡುವುದಿಲ್ಲ. ಸಿಂಧನೂರು ನಗರದಲ್ಲಿ 60–65 ಸಾವಿರ population ಇದೆ. ಪ್ರತಿ ದಿನ 1 ಲಕ್ಷ 25 ಸಾವಿರಕ್ಕಿಂತ ಹೆಚ್ಚು ಜನ ಹಳ್ಳಿಗಳಿಂದ ಕೇಂದ್ರ ಸ್ಥಾನಕ್ಕೆ ಬಂದು ಹೋಗುತ್ತಾರೆ. ಸಣ್ಣ ಸಣ್ಣ ಊರುಗಳಿಗೆ ಪೊಲೀಸ್ ಠಾಣೆಗಳಿಗೆ sanction ಮಾಡುತ್ತಾರೆ, ಇಂಥ ಪ್ರಮುಖ ನಗರಗಳಿಗೆ ಕೊಡಲಿಲ್ಲವೆಂದು ಕೇಳಿದರೆ ಪರಿಶೀಲಿಸುತ್ತೇವೆಂದು ಹೇಳುತ್ತಾರೆ.

ಅಧ್ಯಕ್ಷರು : ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ವೆಂಕಟರಾವ್ ನಾಡಗೌಡ : ಸರ್ಕಾರ ಈ ಬಗ್ಗೆ ಆಶ್ವಾಸನೆ ಕೊಡಬೇಕೆಂದು ನಾನು ತಮ್ಮ ಮೂಲಕ ಸಚಿವರನ್ನು ಕೇಳುತ್ತೇನೆ.

ಡಾ: ವಿ.ಎಸ್. ಆಚಾರ್ಯ : ಈ ವರ್ಷದ ಪರಿಸ್ಥಿತಿ ಅಂದರೆ September October ನಲ್ಲಿ ಏನಾಯಿತೆಂದು ತಮಗೆಲ್ಲಾ ಗೊತ್ತಿದೆ. ಹಾಗಾಗಿ, ಹೊಸ ಪೊಲೀಸ್ ಸ್ಟೇಷನ್ ಪ್ರಾರಂಭಿಸಲಿಕ್ಕೆ ಈ ವರ್ಷ ಆರ್ಥಿಕ ಇಲಾಖೆಯಿಂದ ನಮಗೆ ಅನುಮತಿ ಸಿಗಲಿಲ್ಲ ಇದ್ದ ಸಂಗತಿ ಹೇಳಬೇಕಾಗಿದೆ, ಹೇಳಿದ್ದೇನೆ. ಆದರೂ ಸಹ A,B,C ಎಂದು ನಾವು categorize ಮಾಡಿಟ್ಟದ್ದರಲ್ಲಿ ಒಟ್ಟು 50 police Station ಗಳನ್ನು ತೆರೆಯಬೇಕೆಂದು ಇದ್ದುದರಲ್ಲಿ 25 police Stations ಅನ್ನು categorize ಮಾಡುವಾಗ ಅದರಲ್ಲಿ ಸಿಂಧನೂರು ಬರಲಿಲ್ಲ. ಆದರೆ, ನಾನು ಅದರ ಬಗ್ಗೆ ವಿಶೇಷ ಪ್ರಸ್ತಾವನೆಯನ್ನು ಈಗಾಗಲೇ D.G. ಯವರಿಂದ ಪಡೆದುಕೊಂಡಿದ್ದೇನೆ. 2010–11ರಲ್ಲಿ ಅಲ್ಲಿ ಒಂದು ಸಂಚಾರಿ ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡುತ್ತೇವೆ. ಬಜೆಟ್ ಇದೆ, ಅದಕ್ಕೆ ಅಲ್ಲಿ ಜಾಗವೂ ಇದೆ.

ಶ್ರೀ ವೆಂಕಟರಾವ್ ನಾಡಗೌಡ : ಧನ್ಯವಾದಗಳು.

VI) ವಿಷಯ : ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಅಧ್ಯಕ್ಷರೆ, ಕೊಪ್ಪಳ ನಗರಕ್ಕೆ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆ ಮಂಜೂರು ಮಾಡುವ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆಯುತ್ತೇನೆ.

ಡಾ: ವಿ.ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದಿನ ಉತ್ತರವೇ ಇದಕ್ಕೂ apply ಆಗುತ್ತದೆ.

ಕೊಪ್ಪಳ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆಯನ್ನು ಪ್ರಾರಂಭಿಸುವ ಪ್ರಸ್ತಾವನೆಯನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪಡೆದು, ಮುಂದಿನ ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ ಪೊಲೀಸ್ ಠಾಣೆಗಳನ್ನು ತೆರೆಯಲು ಒದಗಿಸುವ ಅನುದಾನದ ಲಭ್ಯತೆಯನ್ನು ನುಸರಿಸಿ ಕೊಪ್ಪಳ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆ ತೆರೆಯಲು ಪರಿಶೀಲಿಸಲಾಗುವುದು.